**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.302/2022

**PW**. 3

**CW**. 3

**ಸಾಕ್ಷಿಯ ಹೆಸರು –ಗುರುಸ್ವಾಮಿ**

**ತಂದೆಯ ಹೆಸರು –ದೇವಪ್ಪ**

**ವಯಸ್ಸು –62 ವರ್ಷಗಳು**

ದಿನಾಂಕ 26–09–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ಐಲಾಪುರ, ಪಿರಿಯಾಪಟ್ಟಣ ತಾಃ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–1, ಚಾಸಾ–4 ನನ್ನ ಸಹೋದರರು. ಚಾಸಾ–2 ನನ್ನ ಅಕ್ಕನ ಮಗ. ಚಾಸಾ–5 ನನಗೆ ಪರಿಚಯಸ್ಥರು. ಎಲ್ಲ ಆರೋಪಿತರು ಗೊತ್ತು. ಚಾಸಾ–5 ರವರಿಗೆ ನಮ್ಮ ಮಾವನ ಮಗಳಿಂದ ಐಲಾಪುರದ ಒಂದು ಎಕರೆ ಜಮೀನನ್ನು ಕ್ರಯಕ್ಕೆ ಚಾಸಾ–1 ರವರು ಕೊಡಿಸಿದ್ದು, ಸದರಿ ಜಮೀನಿನ ಪಕ್ಕದಲ್ಲಿ ಮಾರಮ್ಮನ ದೇವಸ್ಥಾನ ಮತ್ತು 1 ನೇ ಆರೋಪಿಯ ಜಮೀನು ಇದೆ. ಸದರಿ ಜಮೀನಿನ ಪಕ್ಕದಲ್ಲಿ ಗ್ರಾಮ ಠಾಣಾದ ಜಾಗ ಇದೆ. ಸದರಿ ಜಾಗವನ್ನು ಸಾರ್ವಜನಿಕರ ಅನೂಕೂಲಕ್ಕಾಗಿ ಉಪಯೋಗಿಸುತ್ತಾರೆ.

2021 ನೇ ಸಾಲ್ಲಿನಲ್ಲಿ ಒಂದು ದಿನ ಬೆಳಗ್ಗೆ 9.30 ಗಂಟೆಗೆ ನಾನು ನಮ್ಮ ಮನೆಯಲ್ಲಿದ್ದಾಗ , ಕೂಗಾಟದ ಶಬ್ದ ಕೇಳಿ ಹೊರಗೆ ಬಂದು ನೋಡಲಾಗಿ, ಎಲ್ಲ ಆರೋಪಿತರು ಬಂದು ಚಾಸಾ–1 ರವರನ್ನು ಅಡ್ಡ ಹಾಕಿ, 2 ನೇ ಆರೋಪಿ ಮಚ್ಚಿನಿಂದ ಚಾಸಾ–1 ರವರ ತಲೆಗೆ ಹೊಡೆದ. 3 ನೇ ಆರೋಪಿ ದೊಣ್ಣೆಯಿಂದ ಚಾಸಾ–1 ರವರ ಬಲಗೈಗೆ ಹೊಡೆದ. 1 ನೇ ಆರೋಪಿ ದೊಣ್ಣೆಯಿಂದ

ಚಾಸಾ−1 ರವರ ಎಡಗೈ ಮತ್ತ ಭುಜಕ್ಕೆ ಹೊಡೆದ. ಎಲ್ಲ ಆರೋಪಿತರು ಚಾಸಾ−1 ರವರಿಗೆ ದೊಣ್ಣೆಯಿಂದ ಹಲ್ಲೆ ಮಾಡಿದರು. ಆಗ ಚಾಸಾ−2 ರವರು ಜಗಳ ಬಿಡಿಸಲು ಬಂದಾಗ, 2 ನೇ ಆರೋಪಿ ಚಾಸಾ−2 ರವರಿಗೆ ಮಚ್ಚಿನಿಂದ ಮುಖಕ್ಕೆ ಹೊಡೆದು ಹಲ್ಲೆ ಮಾಡಿದ. ಆರೋಪಿತರು ಚಾಸಾ−1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಮಚ್ಚು ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿದ್ದಾರೆ. ನಂತರ ಚಾಸಾ−1 ರವರು ಪಿರಿಯಾಪಟ್ಟಣ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದಾರೆ.

ಅದೇ ದಿನ ಸಂಜೆ 400 ರಿಂದ 6.00 ಗಂಟೆವರೆಗೆ ಪೊಲೀಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿ ಮುದ್ದೆಮಾಲುಗಳನ್ನು ಜಪ್ತಿ ಮಾಡಿದರು.

**<u>ಪಾಟೀಸವಾಲುಃ− ಆರೋಪಿತರ ಪರ ಶ್ರೀ ಎಸ್ ಪಿ ವಕೀಲರಿಂದಃ</u>−**

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ರೂ. 500/− ವೆಚ್ಚದೊಂದಿಗೆ ಪಾಟೀಸವಾಲನ್ನು ಮುಂದೂಡಲಾಯಿತು.

**<u>ಮರುವಿಚಾರಣೆಃ</u>** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.